ಸಿಸಿ **9438/2018**
**DW1**

**ಸಾಕ್ಷಿಯನ್ನು ದಿನಾಂಕಃ 08-01-2025 ರಂದು ಪ್ರಮಾಣೀಕರಿಸಿ ಪಾಟಿ ಸವಾಲಿಗೆ ಒಳಪಡಿಸಲಾಯಿತು.**
**ಮುಂದುವರೆದ ಪಾಟಿ ಸವಾಲುಃ ಪಿರ್ಯಾದಿ ಪರ ಶ್ರೀ ಎ.ವಿ. ವಕೀಲರಿಂದಃ**

1. ಪಿಡ್ಲ್ಯೂ 2 ರವರು ಹಾಜರುಪಡಿಸಿರುವ ಇ-ಮೇಲ್ ಗಳು ಮತ್ತು ವಾಟ್ ಆಪ್ ಮೇಸೇಜ್ ಗಳನ್ನು ನಾನು ನೋಡಿರುತೇನೆ. 2017ರಲ್ಲಿ ನಾನು ಐಸಿಐಸಿಐ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿದ್ದೆ. ಈ ಪ್ರಕರಣದಲ್ಲಿ ಹಾಜರುಪಡಿಸಿರುವ ಚೆಕ್ಕುಗಳು ಐಸಿಐಸಿಐ ಬ್ಯಾಂಕಿನ ನನ್ನ ಖಾತೆಯ ಚೆಕ್ಕುಗಳು ಆಗಿರುತ್ತವೆ. ಸದರಿ ಬ್ಯಾಂಕಿನಲ್ಲಿ ನನ್ನ ಯಾವ ಮೊಬೈಲ್ ನಂಬರ್ ಕೊಟ್ಟಿದ್ದೇನೆ ಎಂದು ಪರಿಶೀಲಿಸಿಲ್ಲ. ನಿಪಿ 10ರಲ್ಲಿ ನಮೂದಿಸಿರುವ 500279, 500285 ಚೆಕ್ಕುಗಳು ನಗದೀಕರಣ ಆಗಿದೆ. ಸದರಿ ಚೆಕ್ಕಿನ ಮೊತ್ತಗಳನ್ನು ವಾಪಸ್ಸು ಕೊಡುವಂತೆ ನಾನು ಪಿರ್ಯಾದುದಾರರಿಗೆ ಕೇಳಿಲ್ಲ. ಸದರಿ ಹಣ ವಾಪಸ್ಸು ಪಡೆದುಕೊಳ್ಳಲು ಅವರ ವಿರುದ್ದ ಕಾನೂನು ಕ್ರಮ ಕೈಗೊಂಡಿಲ್ಲ ಎಂದರೆ ಸರಿ. ಸದರಿ 2 ಚೆಕ್ಕುಗಳು ನನ್ನ ವೈಯಕ್ತಿಕ ಖಾತೆಯಿಂದ ಕೊಟ್ಟಿದ್ದು, ಕಂಪನಿಯ ಪರವಾಗಿ ಕೊಟ್ಟಿಲ್ಲ ಎಂದರೆ ಸರಿ . ಅದೇ ರೀತಿ ನಿಪಿ 10ರಲ್ಲಿ ನಮೂದಿಸಿರುವ ಉಳಿದ ಚೆಕ್ಕುಗಳನ್ನು ಸಹ ನನ್ನ ವೈಯಕ್ತಿಕ ಖಾತೆಯಿಂದ ಕೊಡಲಾಗಿದೆ ಎಂದರೆ ಸರಿ.

2. ನಿಪಿ 12ರ ಪುಟ 3ರಲ್ಲಿ ಇ-ಮೇಲ್ ದಿಃ 11.03.2016ನಲ್ಲಿ Cash Exit Option ಎಂದಿದ್ದು ಅದರ ಅರ್ಥವೇನು ಎಂದರೆ ವಿಕ್ರಂ ಆಸ್ಪತ್ರೆಯಲ್ಲಿ ಕೊಟ್ಟ ಬಂಡವಾಳವನ್ನು ನಗದು ರೂಪದಲ್ಲಿ ವಾಪಸ್ಸು ತೆಗೆದುಕೊಳ್ಳುವುದು ಎಂದರು. ನಿಪಿ 12ರ ಪುಟ 12ರಲ್ಲಿ 07.04.2017ರಂದು ನಾನು ಕಳುಹಿಸಿರುವ ಇ-ಮೇಲ್ ನ 3ನೇ ಪ್ಯಾರಾದಲ್ಲಿ tragic loss ಎಂದು ನಮೂದು ಇದ್ದು ಅದರ ಅರ್ಥ ಏನೆಂದರೆ ನಾನು ಜೀವನ ಪೂರ್ತಿ ವಿಕ್ರಂ ಆಸ್ಪತ್ರೆಗೆ ಹಾಕಿದ ಶ್ರಮ ವ್ಯರ್ಥವಾಗಿ ಕಂಪನಿ ಲಿಕ್ವಿಡೇಟ್ ಆಗುತ್ತಿದೆ ಎಂದು ಅರ್ಥ ಬರುತ್ತದೆ. ಅದರ 5ನೇ ಪ್ಯಾರಾದಲ್ಲಿ ಇಕ್ವಿಟಿ 0 ಎಂದು ನಮೂದು ಇದ್ದು, ಅದರ ಅರ್ಥ ಶೇರ್ ನ ಬೆಲೆ ಇಳಿದಿದೆ ಎಂದು . ಅದರಲ್ಲಿ ನಮೂದಿಸಿರುವ ಭೂಮಿ ಎಂದರೆ ಕೆರಗಳ್ಳಿಯ ಭೂಮಿಯ

This is a True Copy of the Court Records Online. Authenticated @ districts.ecourtsindia.com/cnr/KABC030268792018/truecopy/order-5.pdf

ಬಗ್ಗೆ ಉಲ್ಲೇಖ ಎಂದರೆ ಸರಿ . ಸದರಿ ಇ-ಮೇಲ್ ನ ಮುಂದುವರೆದ ಭಾಗದಲ್ಲಿ ನಾನು ಪಿರ್ಯಾದುದಾರರಿಗೆ ಹಣ ವಾಪಸ್ಸು ಕೊಡುವ ಬಾದ್ಯಸ್ಥಿಕೆಯನ್ನು ನಮೂದಿಸಿದ್ದೇನೆ ಎಂದರೆ ಸಾಕ್ಷಿಯು ಪಿರ್ಯಾದುದಾರರು ಹಾಕಿದ ಬಂಡವಾಳವನ್ನು ಅವರಿಗೆ ವಾಪಸ್ಸು ಕೊಡಿಸಲು ನಾನು ನನ್ನ ಕೈಯಲ್ಲಿ ಆಗುವ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದೇನೆ ಎಂದು ಹೇಳುತ್ತಾರೆ. ಅದೇ ಇ-ಮೇಲ್ ನಲ್ಲಿ ಭಗವಾನ್ ಮತ್ತು ಕೌಡ್ಲೆ ಪ್ರಸಾದ್ ರವರು ಹಣ ವಾಪಸ್ಸು ಕೊಡಿಸುವ ಸಂಬಂದ ಮಧ್ಯಸ್ಥಿಕೆ ವಹಿಸಿದ್ದಕ್ಕೆ ಧನ್ಯವಾದ ಹೇಳಿರುತ್ತೇನೆ ಎಂದರೆ ಸರಿ. ಅದರ ಮುಂದುವರೆದ ಭಾಗದಲ್ಲಿ this group ಎಂದು ನಮೂದು ಇದ್ದು ಅದು ಪಿರ್ಯಾದುದಾರರ ಬಗ್ಗೆ ಉಲ್ಲೇಖ ಎಂದರೆ ಸರಿ.

3. ನಿಪಿ 12ರ ಪುಟ 15ರಲ್ಲಿ 22.03.2017ರಂದು ಕಳುಹಿಸಿದ ಇ-ಮೇಲ್ ನಲ್ಲಿ ರಾಜಿಯ ಬಗ್ಗೆ ಉಲ್ಲೇಖ ಇದ್ದು ಅದು ಯಾವ ಕಾರಣಕ್ಕೆ ಎಂದು ನೆನಪಿಲ್ಲ. 12.04.2017ರಲ್ಲಿ ನಮೂದಿಸಿರುವ ನೋಟಿಸು ಎಂದರೆ ಅದು ಪಿರ್ಯಾದುದಾರರು ನನಗೆ ನಿಪಿ 5ರ ಪ್ರಕಾರ ಕೊಟ್ಟಿರುವ ನೋಟಿಸು ಮತ್ತು 5 ಜನರು ಎಂದರೆ ಈ ಪ್ರಕರಣದ ಪಿರ್ಯಾದುದಾರರು ಎಂದರೆ ಸರಿ .
4. ಮಾರ್ಚ 2017ರಲ್ಲಿ ಪಿರ್ಯಾದುದಾರರು ನನಗೆ ಕೊಟ್ಟಿರುವ ನೋಟಿಸಿನಲ್ಲಿ ನನ್ನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ಕೊಟ್ಟಿದ್ದು, ಅದಕ್ಕೆ ನಾನು ಪ್ರತ್ಯುತ್ತರ ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ರಾಜಿ ಮಾತುಕತೆಗೆ ಪಿರ್ಯಾದುದಾರರ ಜೊತೆ ಮಾತನಾಡಿದ್ದರಿಂದ ಸದರಿ ನೋಟಿಸಿಗೆ ಪ್ರತ್ಯುತ್ತರ ಕೊಡಲಿಲ್ಲ ಎಂದರೆ ಸರಿ . ಸದರಿ ರಾಜಿ ಮಾತುಕತೆಯ ಸಂಬಂದವೇ ಪುಟ 15ರಲಿ ನಮೂದಿಸಿರುವ ಇ-ಮೇಲ್ ನಲ್ಲಿ ಸೆಟಲ್ ಮೆಂಟ್ ಬಗ್ಗೆ ನಮೂದು ಇರುತ್ತದೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಪಿರ್ಯಾದುದಾರರ ಜೊತೆ ಈ ಮೇಲೆ ತಿಳಿಸಿದ ರಾಜಿ ಮಾತುಕತೆ ಹೊರತುಪಡಿಸಿ ಬೇರೆ ಯಾವುದೇ ರಾಜಿ ಮಾಡಿಕೊಳ್ಳುವ ಪ್ರಮಯ ಇರಲಿಲ್ಲ ಎಂದರೆ ಸಾಕ್ಷಿಯು ROTOSYS ಕಂಪನಿಗೆ ನಾನು ರೂ. 25ರಿಂದ

This is a True Copy of the Court Records Online. Authenticated @ districts.ecourtsindia.com/cnr/KABC030268792018/truecopy/order-5.pdf

www.ecourtsindia.com

35ಲಕ್ಷ ಬಂಡವಾಳ ಹಾಕಿದ್ದು, ಸದರಿ ಹಣವನ್ನು ವಾಪಸ್ಸು ಕೊಡುವ ಬಗ್ಗೆಯು ಸಹ ಪಿರ್ಯಾದುದಾರರ ಜೊತೆ ರಾಜಿ ಮಾತುಕತೆ ಮಾಡುತ್ತಿದ್ದೆ.

5. ನಿಪಿ 12ರ ಪುಟ 22ರಲ್ಲಿ ದಿಃ 11.08.2017ರ ಇ-ಮೇಲ್ ನಲ್ಲಿ ನಾನು ನಮೂದಿಸಿರುವ ಚೆಕ್ಕುಗಳು ಈ ಪ್ರಕರಣದಲ್ಲಿ ಅಮಾನ್ಯಗೊಂಡು ಹಾಜರುಪಡಿಸಿದ ಚೆಕ್ಕುಗಳು ಎಂದರೆ ಸರಿ. ಸದರಿ ಇ-ಮೇಲ್ ನ ಮುಂದುವರೆದ ಭಾಗದಲ್ಲಿ ಇಸ್ಟಾಲ್ ಮೆಂಟ್ ಚೆಕ್ಕುಗಳೆಂದು ನಮೂದು ಇದ್ದು ಪಿರ್ಯಾದುದಾರರಿಗೆ ಹಣ ವಾಪಸ್ಸು ಕೊಡಲು ಕೊಟ್ಟ ಚೆಕ್ಕುಗಳ ಬಗ್ಗೆ ಉಲೇಖ ಎಂದರೆ ಸಾಕ್ಷಿಯು ಪಿರ್ಯಾದುದಾರರು ಇಕ್ವಿಟಿ ಶೇರ್ ನಲಿ ಹಾಕಿದ್ದ ಹಣವನ್ನು ಮಾರಾಟ ಮಾಡಿ ಸದರಿ ಶೇರ್ ಗಳನ್ನು  ಖರೀದಿ ಮಾಡಿದವರಿಂದ ಹಣವನ್ನು ವಾಪಸ್ಸು ಪಿರ್ಯಾದುದಾರರಿಗೆ ಕೊಡುವ ಬಗ್ಗೆ ಉಲ್ಲೇಖ ಇರುತ್ತದೆ , ಆದರೆ ನಾನು ಪಿರ್ಯಾದುದಾರರಿಗೆ ಹಣ ವಾಪಸ್ಸು ಕೊಡುವುದು ಎಂದು ಅರ್ಥವಲ್ಲ.

**6.** ನಿಪಿ 12ರ ಪುಟ 35ರಲ್ಲಿ ಈಗಾಗಲೇ ಪಿರ್ಯಾದುದಾರರು ಹಾಜರುಪಡಿಸಿದ ಚೆಕ್ಕು ಗಳು ಅಮಾನ್ಯಗೊಂಡಿದೆ ಎಂದು ಅರ್ಥ ಎಂದರೆ ಸರಿ . ಸದರಿ ಚೆಕ್ಕುಗಳು ನನ್ನ ಪತ್ನಿ ಕೊಟ್ಟ ಚೆಕ್ಕುಗಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಇ-ಮೇಲ್ ಅನ್ನು ನನ್ನ ಪತ್ನಿ ನನಗೆ ಕಳುಹಿಸಿದ್ದು ನಾನು ಅದನ್ನು ಪಿರ್ಯಾದುದಾರರಿಗೆ ಕಳುಹಿಸಿದೆನು ಎಂದರೆ ಸರಿ. ಈ ರೀತಿ ನನ್ನ ಪತ್ನಿಯ ಪರವಾಗಿ ಪಿರ್ಯಾದುದಾರರ ಜೊತೆ ನಾನೇ ಮಾತುಕತೆ ಮಾಡುತ್ತಿದ್ದೆ ಎಂದರೆ ಸರಿ.

**(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದು ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು)**

**ಸಾಕ್ಷಿಯನ್ನು ಪ್ರಮಾಣೀಕರಿಸಿ ಪಾಟಿ ಸವಾಲಿಗೆ ಒಳಪಡಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಪಿರ್ಯಾದಿ  ಪರ ಶ್ರೀ ಎ.ವಿ. ವಕೀಲರಿಂದಃ**

7. ನನ್ನ ಪತ್ನಿ ವೆಂಕಟೇಶ್ ರವರಿಗೆ ಕೊಟ್ಟ ಚೆಕ್ಕಿನಲ್ಲಿ ಯಾವ ತಪ್ಪಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಚೆಕ್ಕುಗಳಲ್ಲಿ ಯಾವುದಾದರೂ ತಪ್ಪುಗಳು ಇದ್ದ ಕಾರಣ ಅವುಗಳನ್ನು ವಾಪಸ್ಸು ಪಡೆದು ಹೊಸ ಚೆಕ್ಕುಗಳನ್ನು ಕೊಡಲಾಗಿತೋ ನನಗೆ ಗೊತ್ತಿಲ್ಲ. 17.01.2019ರಂದು ಪಿರ್ಯಾದುದಾರರು ಕೊಟ್ಟಿರುವ ನೋಟಿಸಿಗೆ ಪ್ರತ್ಯುತ್ತರ ಕೊಟ್ಟಿಲ್ಲ

This is a True Copy of the Court Records Online. Authenticated @ districts.ecourtsindia.com/cnr/KABC030268792018/truecopy/order-5.pdf

www.ecourtsindia.com

ಎಂದರೆ ಸರಿ. ಸದರಿ ನೋಟಿಸಿನಲ್ಲಿ ಬರೆದ ಮಾಹಿತಿ ಸರಿ ಇದ್ದ ಕಾರಣ ಪ್ರತ್ಯುತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವ ಕಾರಣಕ್ಕೆ ಪ್ರತ್ಯುತ್ತರ ಕೊಟ್ಟಿಲ್ಲ ಎಂದರೆ ಸದರಿ ಸಮಯದಲ್ಲಿ ಕಂಪನಿಯು ಲಿಕ್ವಿಡೇಟ್ ಆಗುತ್ತಿದ್ದು ನನಗೆ ಆಸ್ಪತ್ರೆ ಕಡೆಯಿಂದಸಾಕಷ್ಟು ಒತ್ತಡ ಇದ್ದ ಕಾರಣ ಪ್ರತ್ಯುತ್ತರ ಕೊಟ್ಟಿಲ್ಲ.

8. ಪಿರ್ಯಾದುದಾರರು ಖಾಲಿ ಕಾಗದಗಳಿಗೆ ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದು ದೂರು ಕೊಟ್ಟಿಲ್ಲ. ನಾನು ಬ್ಯಾಂಕಿಗೆ ಸ್ಟಾಪ್ ಪೇಮೆಂಟ್ ಸೂಚನೆ ಕೊಟ್ಟಿರಬಹುದು ಸರಿಯಾಗಿ ನೆನಪಿಲ್ಲ. ಆ ರೀತಿ ಯಾವುದೇ ಸೂಚನೆ ಕೊಟ್ಟಿಲ್ಲ, ಆದ್ದರಿಂದ ಚೆಕ್ಕುಗಳು ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಅಮಾನ್ಯಗೊಂಡಿವೆ ಎಂದರೆ ಗೊತ್ತಿಲ್ಲ. ನಿಪಿ 13ರ ಮೆಸೇಜ್ ನಲ್ಲಿ ನಮೂದಿಸಿರುವ ಭೂಮಿ ಕೆರಗಳ್ಳಿಯ ಬಗ್ಗೆ ಉಲ್ಲೇಖ ಇರುತ್ತದೆ ಎಂದರೆ ಸಾಕ್ಷಿ ಮೊದಲು ಹೌದು ಎನ್ನುತ್ತಾರೆ, ತದನಂತರ ಸಾಕ್ಷಿಯು ಸದರಿ ಫೋನ್ ನಂಬರ್ ನನ್ನ ಬಳಿ ಇರುವುದಿಲ್ಲ, ಆದ್ದರಿಂದ ಸದರಿ ಮೆಸೇಜ್ ಗಳನ್ನು ನಾನು ಕಳುಹಿಸಿದಿನೋ ಇಲ್ಲವೊ ಗೊತ್ತಿಲ್ಲ ಎನ್ನುತ್ತಾರೆ. ನಿಪಿ 13ರ ಪುಟ 2ರಲ್ಲಿನ ಮೆಸೇಜ್ ನಲ್ಲಿ ರೂ. 60ಲಕ್ಷ ನಮೂದಿದ್ದು ಅದು ಈ ಪ್ರಕರಣದ ಚೆಕ್ಕುಗಳ ಮೊತ್ತ ಎಂದರೆ ಗೊತ್ತಿಲ್ಲ. ಪುಟ 13ರಲ್ಲಿ 25.07.2017ರಂದು ಕಳುಹಿಸಿರುವ ಮೆಸೇಜ್ ನಲ್ಲಿ ವಿಕೆ ಎಂದು ನಮೂದು ಇದ್ದು ಅವರು ಬಂಡವಾಳ ಹಾಕಬೇಕು ಎಂದು ಇದ್ದ investor ಆಗಿದ್ದು ಅವರ ಹೆಸರು ವಿಜಯ ಕುಮಾರ್ ಆಗಿರುತ್ತದೆ. 07.08.2017ರಂದು ಕಳುಹಿಸಿರುವ ಮೆಸೇಜ್ ನಲ್ಲಿ ನಮೂದಿಸಿರುವ ಚೆಕ್ಕುಗಳ ಈ ಪ್ರಕರಣದ ಚೆಕ್ಕುಗಳು ಆಗಿರುತ್ತವೆ ಎಂದರೆ ಸಾಕ್ಷಿಯು ಇರಬಹುದು ಗೊತ್ತಿಲ ಎನ್ನುತ್ತಾರೆ. ವಿಕ್ರಂ ಆಸ್ಪತ್ರೆಯಲ್ಲಿ ಪಿರ್ಯಾದುದಾರರು ಹೊಂದಿದ ಶೇರುಗಳ ಸಂಬಂದ ಅವರಿಗೆ ಶೇರ್ ಸರ್ಟಿಫಿಕೇಟ್ ಗಳನ್ನು ಕೊಡಲಾಗಿದೆ. ಅದನ್ನು ಹಾಜರುಪಡಿಸಬಹುದ ಎಂದರೆ ಸಾಕ್ಷಿಯು ಕೌಂಟರ್ ಫೈಲ್ ಅನ್ನು ಹಾಜರುಪಡಿಸಬಹುದು ಎನ್ನುತ್ತಾರೆ.

This is a True Copy of the Court Records Online. Authenticated @ districts.ecourtsindia.com/cnr/KABC030268792018/truecopy/order-5.pdf

www.ecourtsindia.com

**9.** ರತಿ ವಿಕ್ರಂ ಹೆಲ್ತ್ ಕೇರ್ ಪರ್ಮ ನಲ್ಲಿ ನನ್ನ ಪತ್ನಿಯು ಪಾರ್ಟನರ್ ಆಗಿರುತ್ತಾರೋ ಇಲ್ಲವೊ ಗೊತ್ತಿಲ್ಲ, ಆದರೆ ನಾನು ಶೇಕಡ 3 ರಷ್ಟು ಶೇರ್ ಗಳನ್ನು ಹೊಂದಿರುತ್ತೇನೆ. ಪಿರ್ಯಾದುದಾರರಿಗೆ ಹಣ ವಾಪಸ್ಸು ಕೊಡುತ್ತೇನೆ ಎಂದು ಬರವಸೆ ಕೊಟ್ಟು ಅವುಗಳನ್ನು ವಾಪಸ್ಸು ಕೊಡುವ ಉದ್ದೇಶದಿಂದಲೇ ವಿವಾದಿತ ಚೆಕ್ಕುಗಳನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ಎಷ್ಟು ಪ್ಲಾಟ್ ಗಳನ್ನು ಕೊಡುತ್ತೇನೆ ಎಂದು ಹೇಳಿದ್ದೆನೋ ಅದರ ಮೌಲ್ಯವನ್ನು ಲೆಕ್ಕಾ ಹಾಕಿ ಅದರ ಮೊತ್ತಕ್ಕೆ ಚೆಕ್ಕುಗಳನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ 10ರ ದಿಃ 12.08.2017ರ ಲೆಟರ್ ಅನ್ನು ನಾನೇ ತಯಾರಿಸಿದ್ದು, ಅದರಲ್ಲಿರುವ ಮಾಹಿತಿಯನ್ನು ತಿಳಿದುಕೊಂಡೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 10ರ ಪ್ರಕಾರ ಹಣ ವಾಪಸ್ಸು ಕೊಡುತ್ತೇನೆ ಎಂದು ಪಿರ್ಯಾದುದಾರರಿಗೆ ಬರವಸೆ ಕೊಟ್ಟಿದ್ದು ಅದಕ್ಕಾಗಿ ವಿವಾದಿತ ಚೆಕ್ಕುಗಳನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ 10 ದಾಖಲಾತಿ ಖಾಲಿ ಇದ್ದಾಗ ಸಹಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಗೆ ಕಾನೂನಾತ್ಮಕವಾಗಿ ಕೊಡಬೇಕಾಗಿದ್ದ ಹಣವನ್ನು ಕೊಡುವ ಬಾದ್ಯಸ್ಥಿಕೆ ಹೊಂದಿದರಿಂದಲೇ ಬ್ಯಾಂಕಿಗೆ ಸ್ಟಾಪ್ ಪೇಮೆಂಟ್ ಸೂಚನೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಖಾಲಿ ದಾಖಲಾತಿಗೆ ಸಹಿ ಮಾಡದ ಕಾರಣ ಪೋಲೀಸರಿಗೆ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಖಾತೆಯಲ್ಲಿ ಸಾಕಷ್ಟು ಹಣ ಇಡದೆ ದುರುದ್ದೇಶಕ್ಕಾಗಿ ಚೆಕ್ಕುಗಳನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇದೆ**

**16ನೇ ಅಪರ ಮು ಮ ದಂ ಬೆಂ ನಗರ.**

This is a True Copy of the Court Records Online. Authenticated @ districts.ecourtsindia.com/cnr/KABC030268792018/truecopy/order-5.pdf